

# ಅಡಿಕೆ ಬಣ್ಣ, ಬಟ್ಟೆಗೆ ಮಾನ

**ಅಡಿಕೆ ಕೃಷಿಕರಿಗೆ ಶುಭ ಸುದ್ದಿ. ಮೂಲೆ ಹಿಡಿದಿದ್ದ ಅಡಿಕೆ ಚೊಗರಿಗೆ ಕೊನೆಗೂ ಶಾಪಮೋಕ್ಷ ಆಗುವ ಲಕ್ಷಣ. ವಸ್ತ್ರೋದ್ಯಮದಲ್ಲಿ ಅಡಿಕೆಯ ಬಣ್ಣ ಮುಖ್ಯ ಒಳಸುರಿಯಾಗಬಲ್ಲುದು. ಇದೀಗ ವಿದೇಶಗಳಿಗೆ ರಫ್ತು ಆಗಲೂ ತೊಡಗಿದೆ. ಅಡಿಕೆ ಕೃಷಿಕರು ಧರಿಸುವ ಉಡುಪುಗಳು ಅಡಿಕೆ ಬಣ್ಣದ್ದವಾದರೆ ಅದೊಂದು ದೊಡ್ಡ ಹೆಮ್ಮೆ ಅಲ್ಲವೇ?**

**ನಾ. ಕಾರಂತ ಪೆರಾಜೆ**

ಅದೊಂದು ಅಡಿಕೆ ಸಂಬಂಧಿ ಸಭೆ. ಮೂವರು ಒಂದೇ ಬಣ್ಣದ ಖಾದಿ ಅಂಗಿ ಧರಿಸಿದ್ದರು. ಹೆಗಲಲ್ಲಿ ತೂಗುತ್ತಿದ್ದ ಸಣ್ಣ ಪಾಕೆಟ್ ಚೀಲ. ಯಾರ ಗಮನಕ್ಕೂ ಬಂದಂತಿಲ್ಲ. ಇದು 'ಚರಕ' ಸಂಸ್ಥೆಯ ಅಡಿಕೆ ಬಣ್ಣದ ಖಾದಿ ಶರ್ಟು ಎಂದು ಶ್ರೀ ಪಡ್ರೆ ಗಮನ ಸೆಳೆದರು. 'ಅಡಿಕೆಯು ಬಣ್ಣ ತಯಾರಿಯಲ್ಲಿ ಬಳಕೆಯಾಗುತ್ತಿದೆ ಎಂದು ಕೇಳಿ ಗೊತ್ತಷ್ಟೇ. ಈಗ ನಮ್ಮ ಅನತಿ ದೂರದಲ್ಲಿ ತಯಾರಾಗುತ್ತಿದೆ' ಎಂದು ಸಭೆಯಲ್ಲಿದ್ದ ಯೂಟ್ಯೂಬರ್ ರಾಧಾಕೃಷ್ಣ ಆನೆಗುಂಡಿ ಆಶ್ಚರ್ಯ ವ್ಯಕ್ತಪಡಿಸಿದ್ದರು.

ತಿಂದುಗುಳುವ ಅಡಿಕೆಯು ಯಾವುದಕ್ಕೆ ಬಳಕೆಯಾಗುತ್ತಿದೆ? ಬಳಕೆಯ ಯತ್ನಗಳು ಅಲ್ಲಿಲ್ಲಿ ಆಗುತ್ತಿದ್ದರೂ ಪ್ರಶ್ನೆ ಇನ್ನೂ ಜೀವಂತ! ಅಡಿಕೆ ಕೃಷಿಕರು ಸಮಾರಂಭಗಳಲ್ಲಿ ಒಟ್ಟಾದಾಗ, ವೀಳ್ಯ ಹಾಕುತ್ತಿರುವಾಗ ಹೆಚ್ಚಾಗಿ ಕೇಳಿಬರುವ ಪ್ರಶ್ನೆಯಿದು. ಪ್ರಶ್ನೆ ಕೇಳಿದಷ್ಟು ಉತ್ತರಕ್ಕೆ ಕಾತರವಿಲ್ಲ. ವೀಳ್ಯದ ಅಂಗಡಿಗಳ ಪಕ್ಕದಲ್ಲಿ, ಮನೆಯ ಪಾರ್ಶ್ವಗಳಲ್ಲಿ, ಸಾರ್ವಜನಿಕ ಸ್ಥಳಗಳಲ್ಲಿ ಉಗುಳಿ ಉಂಟಾದ ಕೆಂಪಗಿನ ಚಿತ್ತಾರವು ಅಳಿಸಲಾಗದಷ್ಟು ಗಾಢ. ಅಂತಹ ಗಾಢವರ್ಣದ ಅಡಿಕೆಯು ಬಣ್ಣದ ಉದ್ಯಮದಲ್ಲಿ ಸುದ್ದಿಯಾಗುತ್ತಿದೆ.

ಉತ್ತರ ಕನ್ನಡ, ಸಾಗರಗಳಲ್ಲಿ 'ಕೆಂಪಡಿಕೆ' ಮಾಡುವಾಗ ಸಿಗುವ ಉಪ ಉತ್ಪನ್ನ 'ಚೊಗರು'. ಇದು ಕೃಷಿಕ ಮಟ್ಟದಲ್ಲಿ ನಿರ್ಲಕ್ಷಿತ. ಗಡಿಗೆಗಳಲ್ಲಿ ತುಂಬಿಟ್ಟುಕೊಳ್ಳುತ್ತಾರೆ. ಮಧ್ಯವರ್ತಿಗಳು ಬಂದರೆ ಬಿಸಾಕು ದರಕ್ಕೆ ಮಾರಿಬಿಡುತ್ತಾರೆ. ಅದು ಎಲ್ಲಿಗೆ ಹೋಗುತ್ತದೆ, ಯಾಕಾಗಿ ಹೋಗುತ್ತದೆ, ಯಾವ ಉದ್ದೇಶಕ್ಕೆ ಬಳಕೆಯಾಗುತ್ತದೆ ಎಂದು ಯಾರೂ ತಿಳಿಯುವ ಗೋಜಿಗೇ ಹೋದಂತಿಲ್ಲ.

ಬಟ್ಟೆಗಳಿಗೆ ಬಳಸುವ ರಾಸಾಯನಿಕ ಬಣ್ಣಗಳಿಗೆ ಪರ್ಯಾಯವಾಗಿ ನೈಸರ್ಗಿಕ ಬಣ್ಣ ಬಳಸುವುದು ವರ್ತಮಾನದ ಅಗತ್ಯ. ರಾಸಾಯನಿಕ ಬಣ್ಣಗಳ ಬಳಕೆಯಿಂದಾಗಿ ನೀರು ವಿಷಮಯವಾಗುತ್ತಿದೆ. ಇದು ಇಡೀ ಜಗತ್ತಿನ ತಲೆನೋವು. ನಿಧಾನವಾಗಿಯಾದರೂ ನೈಸರ್ಗಿಕ ಬಣ್ಣಗಳಿಗೆ ಒಲವು ಮೂಡುತ್ತಿದೆ. ಅಡಿಕೆ ಉಡುಪಿಗೆ ಕಂದು ಬಣ್ಣ ಕೊಡುತ್ತದೆ. ಈ ಬಣ್ಣದಲ್ಲೂ ತುಂಬ ವೈವಿಧ್ಯದ ಸಾಧ್ಯತೆ ಇದೆ.

### ದೇಸಿಗೆ ಒಲಿದ ಗ್ರಾಹಕ ವರ್ಗ

ಶಿವಮೊಗ್ಗ ಜಿಲ್ಲೆಯ ಹೆಗ್ಗೋಡಿನ 'ನೀನಾಸಂ' ನಾಟಕಗಳಿಗೆ ಪ್ರಸಿದ್ಧ. ಈ ಊರಿನ 'ಚರಕ ಸಂಸ್ಥೆ'ಯು ಬಟ್ಟೆಗಳಿಗೆ ನೈಸರ್ಗಿಕ ಬಣ್ಣ ಕೊಡುವವರಲ್ಲಿ ಮುಂದೆ ಇದೆ. ಇವರು ಬಳಸುವ ಬಣ್ಣಗಳಲ್ಲಿ ಅಗ್ರಸ್ಥಾನ ಅಡಿಕೆಯದಕ್ಕೆ. ಹದಿನೆಂಟು ವರುಷಗಳಿಂದ ಚರಕದ ಖಾದಿ ಉಡುಪುಗಳು ಕನ್ನಾಡಿನಲ್ಲಿ ಪರಿಚಿತ. ಅಲ್ಲಿಲ್ಲಿ ನಡೆಯುವ ಮೇಳಗಳ ಮಳಿಗೆಗಳಲ್ಲಿ ಜುಬ್ಬಾ, ಕುರ್ತಾ, ಲೇಡಿಸ್ ಟಾಪ್, ಹ್ಯಾಂಡ್ ಬ್ಯಾಗ್‌ಗಳು, ಪರ್ಸ್‌ಗಳಿಗೆ ನಿಗದಿತ ಗ್ರಾಹಕರು.

ಮೇಳಗಳು ಹತ್ತಿರ ಬಂತೆಂದರೆ ಕಾದು ಕುಳಿತುಕೊಳ್ಳುವ ಜುಬ್ಬಾಪ್ರಿಯರ ಸಂಖ್ಯೆ ಸಣ್ಣದಲ್ಲ. 'ಒಮ್ಮೆ ಈ ಜುಬ್ಬಾ ಧರಿಸಿದಾಗ ಸಿಗುವ ಸುಖವು ಬೇರೆ ಉಡುಪುಗಳಲ್ಲಿ ಸಿಗುವುದಿಲ್ಲ. ಕೆಲವು ವರುಷದಿಂದ